ಸಂಚಾಲಕರಾಗಿ ಆರ್.ಎಸ್.ಪಾಟೀಲ ಆಯ್ಕೆ

ಉದಯಕಾಲ ನ್ಯೂಸ್

ಚಡಚಣ: ಭಾರತೀಯ ಜನತಾ ಪಾರ್ಟಿ ವಿಜಯಪುರ ಜಿಲ್ಲೆಯ ಅಧ್ಯಕ್ಷರಾದ ಆರ್.ಎಸ್.ಪಾಟೀಲ (ಕುಚಬಾಳ) ಅವರ, ರಾಜ್ಯ ಸಂಚಾಲಕರಾದ ವಿಜಯಕುಮಾರ ಕುಡಿಗ 'ನೂರ ಅವರ ಮಾರ್ಗದ ರ್ಶನದಂತೆ ಜಿಲ್ಲಾ ಸ೦ಯೋಜಕರಾದ ಮಲ್ಲಿಕಾರ್ಜುನ್ ಜೋಗೂರ ಅವರ ಸೂಚನೆ ಮೇರೆಗೆ ಅಂಬಣ್ಣ ಪೂಜಾರಿ (ದೇವರ ನಿಂಬರಗಿ) ಅವರನ್ನು ಚಡಚಣ ಮಂಡಲದ ವಾಣಿಜ್ಯ ಮತ್ತು ವ್ಯಾಪಾರ ಪ್ರಕೋಷ್ಟಕದ ಸಂಚಾಲಕರನ್ನಾಗಿ ನೇಮಿಸಲಾಗಿದೆ ಎಂದು ಜಿಲ್ಲಾ ವಾಣಿಜ್ಯ ಮತ್ತು ವ್ಯಾಪಾರ ಪ್ರಕೋಷ್ಟಕದ ಜಿಲ್ಲಾ ಸಂಚಾಲಕರಾದ ಭರತ ಎಸ್ ಕುಲಕರ್ಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಕ್ಕ ಸಿಂದಗಿಯಲ್ಲಿ ಅಟಲ್ ಜಿ ಜನ್ಮ ಶತಮಾನೋತ್ಸವ

ಉದಯಕಾಲ ನ್ಯೂಸ್

ಸಿಂದಗಿ: ಮಾಜಿ ಪ್ರಧಾನಿ, ಅಜಾತ ಶತ್ರು, ಕವಿ ಹೃದಯಿ ಭಾರತ ರತ್ನ ಅಟಲ್ ಬಿಹಾರಿ ವಾಜಪೇಯಿಯವರ 100ನೇ ಜನ್ಮ ಶತಮಾನೋತ್ಸವದ ಅಂಗವಾಗಿ ಭಾರತೀಯ ಜನತಾ ಪಕ್ಷ ಸಿಂದಗಿ ಮಂಡಲದ ವತಿಯಿಂದ ಸುಶಾಸನದಿನವನ್ನಾಗಿ ಆಚರಣೆಯನ್ನು ತಾಲೂಕಿನ ಚಿಕ್ಕ ಸಿಂದಗಿ ಗ್ರಾಮದಲ್ಲಿ ಇಂದು ಬುದುವಾರ ಹಮ್ಮಿಕೊಳ್ಳಲಾಗಿದೆ ಕಾರ್ಯಕ್ರಮದಲ್ಲಿ ಭಾರತೀಯ ಜನತಾ ಪಕ್ಷದ ಹಿರಿಯರು, ಯುವಕರು, ಪಕ್ಷದ ಅಭಿಮಾನಿಗಳು, ಹೆಚ್ಚಿನ ಸಂಖ್ಯೆಯಲ್ಲಿ ಸೇರಬೇಕು ಎಂದು ಸಿಂದಗಿ ಮಂಡಲ ಅಧ್ಯಕ್ಷ ಸಂತೋಷಗೌಡ ಪಾಟೀಲ್ (ಡಂಬಳ) ಕರೆ ನೀಡಿದ್ದಾರೆ. ಈ ಕುರಿತು ಪ್ರಕಟಣೆಯಲ್ಲಿ ತಿಳಿಸಿದ ಅವರು ಚಿಕ್ಕ ಸಿಂದಗಿ ಬೂತ್ ಸಂಖ್ಯೆ 206 ಬೂತ್ ಅಧ್ಯಕ್ಷರ ಮನೆ ಮೇಲೆ ಭಾಜಪ ಧ್ವಜಾರೋಹಣ ಕಾರ್ಯಕ್ರಮ ನೆರವೇರುವುದು ಈ ಕಾರ್ಯಕ್ರಮದಲ್ಲಿ ಸಂಸದ ರಮೇಶ್ ಜಿಗಜಿಣಗಿ, ಮಾಜಿ ಶಾಸಕ ರಮೇಶ ಭೂಸನೂರ ಸೇರಿದಂತೆ ಜಿಲ್ಲೆಯ ಅನೇಕ ನಾಯಕರುಗಳು ಪಾಲ್ಗೊಳ್ಳಲಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಪದಾಧಿಕಾರಿಗಳು ಮುಖಂಡರು ಹಾಜರಿಬೇಕೆಂದು ಎಂದು ಮನವಿ ಮಾಡಿದ್ದಾರೆ.

ಅಕ್ಷತಾ ವಡ್ಡರ ಯುನಿವರ್ಸಿಟಿ ಬ್ಲೂ ಆಗಿ ಆಯ್ಕೆ

ಉದಯಕಾಲ ನ್ಯೂಸ್

ಬಾದಾಮಿ: ಈಚಿಗೆ ಹುನಗುಂದ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜರುಗಿದ ಅಂತರ್ ಕಾಲೇಜು ಮಹಿಳೆಯರ ಖೋ ಖೋ ಪಂದ್ಯಾವಳಿ ಹಾಗೂ ಬಾಗಲಕೋಟ ವಿಶ್ವವಿದ್ಯಾಲಯ ಜಮಖಂಡಿಯ ಮಹಿಳಾ ಖೋ ಖೋ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿ ಮಹಾವಿದ್ಯಾಲಯದ ಪದವಿ ಕಲಾ ಮೊದಲನೇ ಸೆಮಿಸ್ಟರ್ ವಿದ್ಯಾರ್ಥಿನಿ ಕುಮಾರಿ ಅಕತಾ ವಡ್ಡರ್ ಯುನಿವರ್ಸಿಟಿ-ಬ್ಲೂ (UNIVERSITY BLUE) ಆಗಿ ಆಯ್ಕೆ ಆಗಿದ್ದಾರೆ ಎಂದು ಸರಕಾರಿ ಪದವಿ ಕಾಲೇಜು ಪ್ರಾಚಾರ್ಯ ಡಾ.ಎಂ.ಎನ್.ಸಿದ್ದಲಿಂಗಪ್ಪನವರ ಪ್ರಕಟಣೆಯಲ್ಲಿ ತಿಳಿಸಿದಾರೆ. ಕೇರಳ ರಾಜ್ಯದ ಕ್ಯಾಲಿಕಟ್ಟದಲ್ಲಿ ಡಿ.28 ರಂದು ಜರುಗಲಿರುವ ಸೌತ್ ಜೋನ್ ಮಹಿಳೆಯರ ಖೋ-ಖೋ ಪಂದ್ಯಾವಳಿಯಲ್ಲಿ ಬಾಗಲಕೋಟ ವಿಶ್ವವಿದ್ಯಾಲಯ ತಂಡವನ್ನು ಕುಮಾರಿ ಅಕ್ಷತಾ ವಡ್ಡರ್ ಪ್ರತಿನಿಧಿಸಲಿದ್ದಾಳೆ ಎಂದು ಪ್ರಾಚಾರ್ಯರು ತಿಳಿಸಿದಾರೆ.

ಅಭಿನಂದನೆ: ವಿದ್ಯಾರ್ಥಿನಿಗೆ ಮಾರ್ಗದರ್ಶನ ನೀಡಿದ ಮಹಾವಿದ್ಯಾಲಯದ ದೈಹಿಕ ನಿರ್ದೇಶಕ ಪ್ರೊ. ಜಯಪ್ರಕಾಶ್ ಬೀಳಗಿ ಹಾಗೂ ಆಯ್ಕೆಯಾದ ವಿದ್ಯಾರ್ಥಿನಿಗೆ ಮಹಾವಿದ್ಯಾಲಯದ ವತಿಯಿಂದ ಪ್ರಾಚಾರ್ಯ ಡಾ.ಎಂ.ಎಂ.ಸಿದ್ದಲಿಂಗಪ್ಪನವರ, ಬೋಧಕ-ಬೋಧಕೇತರ ಸಿಬ್ಬಂದಿಯವರು, ಬಾದಾಮಿ ಮತಕ್ಷೇತ್ರದ ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಬಿ.ಬಿ.ಚಿಮ್ಮನಕಟ್ಟಿ, ಕಾಲೇಜು ಶಿಕ್ಷಣ ಕಾಲೇಜು ಅಭಿವೃದ್ಧಿ ಸಮಿತಿ ಸರ್ವ ಸದಸ್ಯರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಜೀವ ವಿಮೆ ಸಂಸ್ಥೆ ಕಡಿಮೆ ಬಡ್ಡಿ ಹಣದ ನೆರವು ದೇಶದ ಆರ್ಥಿಕ ರಂಗಕ್ಕೆ ಚೇತೋಹಾರಿ: ಬಾಪುಗೌಡ

ಉದಯಕಾಲ ನ್ಯೂಸ್

ಮಹಾಲಿಂಗಪುರ: ಕೆಲ ಸಂದರ್ಭಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಹತ್ತು, ಇಪ್ಪತ್ತು ಸಾವಿರ ಕೋಟಿಗಳಷ್ಟು ಸಾವರಿನ್ ಗ್ಯಾರಂಟಿಯ ಕಡಿಮೆ ಬಡ್ಡಿ ದರದ ಹಣದ ನೆರವು ನೀಡಿ ಎಲ್‌ಆಯ್‌ಸಿ ದೇಶದ ಆರ್ಥಿಕ ರಂಗಕ್ಕೆ ಚೇತೋಹಾರಿಯಾಗಿ ಕೆಲಸ ಮಾಡುತ್ತಿದೆ. ಇದಕ್ಕೆಲ್ಲ ಕಾರಣೀಭೂತರು ಸಂಸ್ಥೆಯ ವಿಮಾ ಪಾಲಿಸಿದಾರರು ಮತ್ತು ವಿಮಾ ಪ್ರತಿನಿಧಿಗಳು ಎಂದು ಜಮಖಂಡಿ ವಿಭಾಗ ಜೀವ ವಿಮಾ ಅಭಿವೃದ್ಧಿ ಅಧಿಕಾರಿ ಬಾಪುಗೌಡ ಹೆಮ್ಮೆಯಿಂದ ಹೇಳಿದರು.

ಎಂಡಿಆರ್‌ಟಿ (ಮಿಲಿಯನ್ ಡಾಲರ್ ರೌಂಡ್ ಟೇಬಲ್) ಆಗಿ ಬಡ್ತಿ ಪಡೆದ ಜೀವ ವಿಮಾ ನಿಗಮದ ಮಹೇಶ್ ಆರಿ ಅವರಿಂದ ಮನೆ ಆವರಣದಲ್ಲಿ ಹಿರಿಯ ಜೀವ ವಿಮೆ ಅಧಿಕಾರಿಗಳಿಗೆ, ಪ್ರತಿನಿಧಿಗಳಿಗೆ ಮತ್ತು ಪಾಲಿಸಿದಾರರಿಗೆ ಅಭಿನಂದನ ಮತ್ತು ಗೌರವ ಸನ್ಮಾನ ಕಾರ್ಯಕ್ರಮ ನಡೆಯಿತು.

ಈ ಸಮಯ ಮಾತನಾಡಿದ ಬಾಪುಗೌಡರು, ಜೀವ ವಿಮೆಯು ಪಾಲಿಸಿದಾರರಿಗೆ ವಿಶ್ವಾಸಿ ಸಂಸ್ಥೆಯಾಗಿ ರಾಷ್ಟ್ರಾದ್ಯಂತ ಕೆಲಸ ಮಾಡುತ್ತಿದ್ದು, ಆಪತ್ಕಾಲದಲ್ಲಿ ಸರಿಯಾಗಿ ಹಣ ಒದಗಿಸಿ ದೇಶದ ನಾಗರಿಕರಿಗೆ ಆರ್ಥಿಕ ರಕ್ಷಣೆ ನೀಡುತ್ತಿದೆ. ಇದೂ ಅಲ್ಲದೆ ರಸ್ತೆ, ಡ್ಯಾಂ, ವಿದ್ಯುತ್ ಇನ್ನೂ ಅನೇಕ

ವಿಧಗಳಲ್ಲಿ ರಾಷ್ಟ್ರ ನಿರ್ಮಾಣದಂತ ಅನೇಕ ಮಹತ್ವದ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ದೇಶದಲ್ಲಿ ಇಷ್ಟೆಲ್ಲಾ ಕಾರ್ಯಕ್ರಮಗಳು ನಡೆದಿರಬೇಕಾದರೆ, ಹಗಲಿರುಳು ಸಂಸ್ಥೆಯ ಶ್ರೇಯಸ್ಸಿಗಾಗಿ ದುಡಿಯುತ್ತಿರುವ ಜೀವವಿಮಾ ಪ್ರತಿನಿಧಿಗಳೇ ಕಾರಣ ಎಂದು ವಿಮಾ ಪ್ರತಿನಿಧಿಗಳ ಕಾರ್ಯವನ್ನು ಶ್ಲಾಘಿಸಿ ಎಂಡಿಆರ್‌ಟಿ ಆರಿ ಅವರು ಇನ್ನೂ ಹೆಚ್ಚಿನ ಸಾಧನೆಗೈಯಲಿ ಎಂದರು.

ನಂತರ ರಬಕವಿ/ ಬನಹಟ್ಟಿ ಸಂಪರ್ಕ ಶಾಖೆಯ ಶಾಖಾಧಿಕಾರಿ ಶಿವಪ್ರಸಾದ್ ಮಾತನಾಡಿ, ಇವರಲ್ಲಿ ಪ್ರತಿನಿಧಿ ಮಹೇಶ್ ಆರಿ ಎರಡು ದಶಕಗಳಿಂದ ಸಾರ್ವಜನಿಕರೊಂದಿಗೆ ಉತ್ತಮ ಬಾಂಧವ್ಯ ಹೊಂದಿ, ತಮ್ಮ ಬದುಕನ್ನು ಕಟ್ಟಿಕೊಳ್ಳುವ ಮೂಲಕ ಸುತ್ತಮುತ್ತಲಿನ ಸಾವಿರಾರು ಜನರಿಗೆ ಆರ್ಥಿಕ ಆಸರೆ ನೀಡಿ, ರಬಕವಿ/ ಬನಹಟ್ಟಿ, ಮತ್ತು ಜಮಖಂಡಿ ಶಾಖೆಗಳಲ್ಲಿ ಮೊದಲ ಎಂ ಡಿ ಆರ್ ಟಿ ಗೌರವಕ್ಕೆ ಭಾಜನರಾಗಿದ್ದಾರೆ. ಇವರು ಪ್ರತಿ ವರ್ಷ ಅಮೇರಿಕಾದಲ್ಲಿ ಜರುಗುವ ವಿಶ್ವ ವಿಮೆ ಸಂಸ್ಥೆಗಳ ಮಹಾ ಸಮ್ಮೇಳನದಲ್ಲಿ ಭಾರತದ ಧ್ವಜವನ್ನು ಎತ್ತಿ ಹಿಡಿಯಲಿದ್ದಾರೆ ಇದು ನಮ್ಮೆಲ್ಲರ ಹೆಮ್ಮೆ ಹಾಗೂ ಇವರು ಉತ್ತರೋತ್ತರವಾಗಿ ಬೆಳೆದು ಜೀವ ವಿಮೆಯ ಖ್ಯಾತಿಯನ್ನು ಹೆಚ್ಚಿಸಲಿ ಎಂದರು.

ನಿವೃತ್ತ ಹಿರಿಯ ಅಭಿವೃದ್ಧಿ ಅಧಿಕಾರಿಗಳಾದ ಎಸ್ ಎಂ ಜಮಖಂಡಿ ಅಧ್ಯಕ್ಷತೆ ವಹಿಸಿ ಮಾತನಾಡಿ, ಯಾವುದೇ ವ್ಯಕ್ತಿಗೆ ಸಾಧನೆ ಬೆನ್ನು ಹತ್ತಿ ಬರಬೇಕಾದರೆ ಆತ ಕಠಿಣ ಪರಿಶ್ರಮ, ಪ್ರಾಮಾಣಿಕತೆ ಅಲ್ಲದೆ ಸಮಾಜದ ಜನರ ಜೊತೆಗೆ ಉತ್ತಮ ಬಾಂಧವ್ಯವನ್ನು ಕೂಡ ಹೊಂದಿರಬೇಕು. ಆ ಕೆಲಸವನ್ನು ಕನಿಷ್ಠ 20 ವರ್ಷಗಳಿಂದ ಸತತ ಪ್ರಯತ್ನ ಮಾಡುತ್ತಾ ಮಹೇಶ ಆರಿ ಅವರು ಉನ್ನತ ಎಂಡಿಆರ್‌ಟಿ ಗೌರವಕ್ಕೆ ಪಾತ್ರರಾಗಿದ್ದಾರೆ ಎಂದರು.

ಹಿರಿಯ ಪತ್ರಕರ್ತರಾದ ಜಯರಾಂಶೆಟ್ಟಿ ಪ್ರಾಸ್ತಾವಿಕ ಭಾಷಣ ಮಾಡಿ, ಒಂದು ಕಾಲವಿತ್ತು, ಜನ ಎಲ್ ಆಯ್ ಪ್ರತಿನಿಧಿಗಳನ್ನ ನೋಡಿದರೆ ಓಡುತ್ತಿದ್ದರು, ಬಚ್ಚಿಟ್ಟುಕೊಳ್ಳುತ್ತಿದ್ದರು. ಈಗ ಕಾಲ ಬದಲಾಗಿ ಜೀವವಿಮೆಯಿಂದ ಬದುಕಿಗೆ ಸಿಗುವ ಆಸರೆ ಜನತೆಗೆ ಮನವರಿಕೆಯಾಗಿ ಅದರ ಮೇಲೆ ವಿಶ್ವಾಸ ಬಂದಿದೆ. ಆದ್ದರಿಂದ ವಿಮೆದಾರರು ಪ್ರಿಮಿಯಂ ಹಣ ಕಟ್ಟಲು ವಿಮೆ ಕಚೇರಿಗಳಲ್ಲಿ ಸರದಿ ಸಾಲುಗಳಲ್ಲಿ ನಿಂತಿದ್ದಾರೆ. ಇದಕ್ಕೆಲ್ಲ ಮಹೇಶ್ ಆರಿ ಅಂತಹವರ ಪರಿಶ್ರಮವೇ ಕಾರಣವಾಗಿದೆ ಎಂದರು.

ವೇದಿಕೆ ಗಣ್ಯರು ಸಸಿಗೆ ನೀರು ಹಾಕಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇದೆ ಸಮಯದಲ್ಲಿ ಹಿರಿಯರಿಗೆ ಸನ್ಮಾನ ಮತ್ತು ನೆನಪಿನ ಕೊಡುಗೆಗಳನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಹಾಲಿಂಗಪುರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಶೇಖರ ಅಂಗಡಿ, ಜಮಖಂಡಿ ವಿಭಾಗ ಜೀವ ವಿಮಾ ಅಭಿವೃದ್ಧಿ ಅಧಿಕಾರಿ ಬಾಪುಗೌಡ, ನಿವೃತ್ತ ಹಿರಿಯ ಅಭಿವೃದ್ಧಿ ಅಧಿಕಾರಿ ಎಸ್ ಎಂ ಜಮಖಂಡಿ, ಕಾರ್ಯ ನಿರತ ಪತ್ರಕರ್ತರಾದ ಸಂಘದ ಅಧ್ಯಕ್ಷ ಮಹೇಶ್ ಮಣ್ಣಯ್ಯನವರಮಠ, ಹಣ್ಮಂತ ನಾವಿ, ಮೀರಾ ತಟಗಾರ, ಹಾಸಿಂ ಪೆಂಡಾರಿ, ಶಿಶಿ ನಕಾತಿ, ಕೃಷ್ಣಾ ನ್ಯಾಮಗೌಡ, ಸ್ವಪ್ನಿಲ್ ಮೇಗನ್ನವರ, ಸಚಿನ್, ಶಿವಾನಂದ, ಮಾನಾಜಿ ಕಲಾಲ, ಮನು ಕರಡಿ, ಅರ್ಜುನ್ ಮೇಟಿ ಮುಂತಾದವರಿದ್ದು, ಎಂಡಿಆರ್ಟಿ ಗೌರವ ಪಡೆದ ಮಹೇಶ್ ಆರಿ ಸ್ವಾಗತಿಸಿ, ಪತ್ರಕರ್ತರಾದ ಲಕ್ಷ್ಮಣ ಕಿಶೋರಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

ಮಾನವೀಯ ಮೌಲ್ಯಗಳನ್ನು ಮೈಗುಡಿಸಿಕೊಳ್ಳಿ: ನಾಗರತ್ನ ಮನಗೂಳಿ

ಉದಯಕಾಲ ನ್ಯೂಸ್

ಸಿಂದಗಿ: ಯೇಸುಕ್ರಿಸ್ತರ ಸಂದೇಶಗಳಾದ ಕ್ಷಮೆ, ಪ್ರೀತಿ ಸಹನೆ, ಸಹಬಾಳ್ವೆ ಮತ್ತು ಶಾಂತಿ ಈ ಮಾನವೀಯ ಮೌಲ್ಯಗಳನ್ನು ನಮ್ಮ ನಿತ್ಯ ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಇನ್ನರ್ ವೀಲ್ ಕ್ಲಬ್‌ನ ಮಾಜಿ ಅಧ್ಯಕ್ಷಿನಿ ನಾಗರತ್ನ ಮನಗೂಳಿ ಹೇಳಿದರು.

ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಸಂಗಮ ಸಮಗ್ರ ಗ್ರಾಮೀಣ ಅಭಿವೃದ್ಧಿ ಕೇಂದ್ರದಲ್ಲಿ ಹಮ್ಮಿಕೊಂಡ ಅಂತರಧರ್ಮಿಯ ಸ್ನೇಹಕೂಟದಲ್ಲಿ ಬಾಗವಹಿಸಿ ಅವರು ಮಾತನಾಡಿದರು.

ಸಂಗಮ ಎಂದರೆ ಎಲ್ಲರು ಒಟ್ಟಿಗೆ ಕೂಡಿಕೊಳ್ಳುವುದು. ವಿವಿಧ ರೀತಿಯಲ್ಲಿ ಸಂಗಮ ಸಂಸ್ಥೆಯು ಶಿಕ್ಷಣ ನೀಡುತ್ತಿದ್ದೆ, ಯಾರಿಗೂ ಬೇದಬಾವ ಮಾಡದೇ ಎಲ್ಲರಿಗೂ ಅವಕಾಶಗಳನ್ನು ಕೊಡುತ್ತಾರೆ. ದೇವರು ಪ್ರತಿಯೊಬ್ಬರ ಆತ್ಮ ಒಳಗೆ ಇರುವನು. ನಾವು ಹೊಟ್ಟೆ ಕಿಚ್ಚು, ಅಸೂಯೆ ಪಡದೇ ಎಲ್ಲರೊಂದಿಗೆ ಸಹಬಾಳ್ವೆಯಿಂದ ಇರಬೇಕು ಎಂದರು.

ನಂತರ ದಿವ್ಯ ಸಾನಿದ್ಯ ವಹಿಸಿದ ಶ್ರೀ ಶ್ರೀ ಶಾಂತಗಂಗಾಧರ ಸ್ವಾಮಿಜಿ, ಶ್ರೀ ಗುರುದೇವ ಆಶ್ರಮ ಸಿಂದಗಿ ಮಾತನಾಡಿ ಯೇಸು ಅವರ ಜೀವನ ಚರಿತ್ರೆ ಹಾಗೂ ಅವರು ಮಾಡಿದ ಜನರ ಸೇವೆ ಅಮೂಲ್ಯವಾದದ್ದು. ಯೇಸು ಅವರ ತತ್ವ ಮತ್ತು ಮೌಲ್ಯಗಳನ್ನು ಎಲ್ಲರೂ ಅನುಸರಿಸಬೇಕೆಂದು ಎಂದು ಹೇಳಿದರು.

ನಸುರುದ್ದೀನ ಮುಲ್ಲಾ, ಮೌಲ್ವಿಗಳು ಗಣಿಹಾರ ಮಾತನಾಡಿ ಕ್ರಿಸ್ಮಸ್ ಹಬ್ಬವನ್ನು ವಿಶ್ವದಾದ್ಯಂತ ಎಲ್ಲರೂ ಆಚರಿಸುತ್ತಾರೆ. ನಮ್ಮಲ್ಲಿ ಯೇಸುವಿನ ಮೌಲ್ಯಗಳಾದ ನಿಸ್ವಾರ್ಥತೆ, ಕ್ಷಮೆ, ಪ್ರೀತಿಯನ್ನು ನಾವು ರೂಡಿಸಿಕೊಳ್ಳಬೇಕೆಂದು ಎಂದರು.

ಫಾದರ್ ಜೀವನ್ ಮಾತನಾಡಿ ಸಂಗಮ ಸಂಸ್ಥೆಯು ಪ್ರತಿ ವರ್ಷ ದೀಪಾವಳಿ, ಬಕ್ರೀದ್ ಮತ್ತು ಕ್ರಿಸ್ಮಸ್ ಹಬ್ಬಗಳನ್ನು ಎಲ್ಲಾ ಧರ್ಮಗಳ ಜೊತೆಗೂಡಿ ಆಚರಿಸುತ್ತೇವೆ ಎಂದು ನುಡಿದರು.

ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ಸಂತೋಷ್‌ರ, ಸಂಗಮ ಸಂಸ್ಥೆಯ ಸಹನಿರ್ದೇಶಕಿಯಾದ ಸಿಸ್ಟರ್ ಸಿಂತಿಯಾ ಡಿಮೆಲ್ಲೊ, ಸರ್ವಧರ್ಮ ಪ್ರಾರ್ಥನಾ ವಿಧಿಯನ್ನು ನಡೆಸಿಕೊಟ್ಟರು.

ಕ್ರಿಸ್ಮಸ್ ಹಬ್ಬದ ಪ್ರಯುಕ್ತ ದೇವದಾಸಿ ತಾಯಂದಿರಿಗೆ, ವಿಶೇಷ ಚೇತನರಿಗೆ ಮತ್ತು ಹೆಚ್.ಐ.ವಿ ಬಾದಿತರಿಗೆ ಕಿಟ್ ವಿತರಿಸಲಾಯಿತು. ಹೊಲಿಗೆ ತರಬೇತಿ ಶಿಕ್ಷಕಿಯರಿಗೆ ಹಾಗೂ ಕಲಿಕಾ ಕೇಂದ್ರದ ಶಿಕ್ಷಕಿಯರಿಗೆ ಕ್ರಿಸ್ಮಸ್ ಉಡುಗೊರೆ ನೀಡಲಾಯಿತು. ಉಮೇಶ್ ನಿರೂಪಿಸಿದರು, ವಿಜಯಕುಮಾರ ಬಂಟನೂರ ಸ್ವಾಗತಿಸಿದರು ಮತ್ತು ಮಲ್ಕಪ್ಪ ಹಲಗಿ ವಂದಿಸಿದರು.

ಮಂಗಳಮುಖಿಯರು ಸಮಾಜಕ್ಕೆ ಮಾದರಿಯಾಗಲಿ: ಕಾವ್ಯ ರಡ್ಡಿ

ಉದಯಕಾಲ ನ್ಯೂಸ್

ಮುದ್ದೇಬಿಹಾಳ: ಅಕ್ಷರ ಕಲಿತರೆ ಮನುಷ್ಯನ ಜೀವನವೆ ಬದಲಾಗುತ್ತದೆ, ಈ ಮಾತನ್ನೆ ಅರಿತುಕೊಂಡು ನಾನು ನನ್ನ ಮನದಲ್ಲಿ ಎಷ್ಟೇ ನೋವಿದ್ದರು, ಮನೆಯವರನ್ನು ಬಿಟ್ಟು ಹೊರ ಬಂದರು ಕೂಡಾ ಅದನ್ನೆಲ್ಲಾ ಲೆಕ್ಕಿಸದೆ, ಜೀವನದಲ್ಲಿ ಮನುಷ್ಯನಾಗಿ ಹುಟ್ಟಿ ಅದರಲ್ಲೂ ಮಂಗಳಮುಖಿಯಾಗಿ ಏನನ್ನಾದರು ಸಾಧನೆ ಮಾಡಲೇಬೇಕು ಸತತ ಪ್ರಯತ್ನದ ಪಲವಾಗಿ ಇಂದು ಸರಕಾರಿ ಹುದ್ದೆ ಸೇರಿಕೊಂಡಿದ್ದೇನೆ ಎಂದು ಮಂಗಳಮುಖಿ ಕಾವ್ಯ ರಡ್ಡಿ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಮಂಗಳಮುಖಿ ಸಮಾಜದಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ಈ ಸಮಸಜ ನಮ್ಮನ್ನು ನೋಡುವ ದೃಷ್ಟಿ ಬೇರೆ ಇರಬಹುದು, ನಮಗೆ ದೇವರ ಮಕ್ಕಳು ಎಂದು ಸಮಾಜ ಹೇಳುತ್ತದೆ, ಹುಟ್ಟುವಾಗ ಯಾರು ಇದೇ ರೀತಿಯಲ್ಲಿ ಹುಟ್ಟಬೇಕು, ಹೀಗೆ ಹುಟ್ಟಬೇಕು ಯಾರು ಅರ್ಜಿ ಹಾಕಿ ಹುಟ್ಟಿರುವದಿಲ್ಲಾ, ಮಂಗಳಮುಖಿಯರಿಗೂ ಮನಸ್ಸಿದೆ ಅವರಲ್ಲಿಯೂ ಕನಸ್ಸಿದೆ ಕಲ್ಪನೆಯಿದೆ ಎಂದು ಪ್ರತಿಯೊಬ್ಬರು ತಿಳದುಕೋಳ್ಳಬೇಕು,ಅದರಂತೆಯೇ ಸಮಾಜದಲ್ಲಿ ಮಂಗಳಮುಖಿಯರನ್ನು ಮುನ್ನಲೆಗೆ ತರಬೇಕು ಎನ್ನುವ ದೃಷ್ಟಿಯಿಂದ ಸರಕಾರಗಳು ನಮಗೆ ಸರಕಾರಿ ಹುದ್ದೆಯನ್ನು ಹಾಗೂ ರಾಜಕೀಯವಾಗಿ ಸ್ಥಾನಗಳನ್ನು ಪಡೆದುಕೋಳ್ಳಲು ಮೀಸಲಾತಿಯನ್ನು ಕಲ್ಪಿಸಿದೆ, ಬೀಕ್ಷೆ ಜೀವನ ಮಾಡುವದಕ್ಕಿಂತ ಮಂಗಳಮುಖಿಯರಲ್ಲಿಯೂ ಹೆಚ್ಚಿಗೆ ಅಕ್ಷರಸ್ಥರಿದ್ದಾರೆ,ವಿದ್ಯಾಬ್ಯಾಸವನ್ನು ಕಲಿತು ಸರಕಾರಿ ಇಲಾಖೆಯಲ್ಲಿ ವಿವಿಧ ಹುದ್ದೆಯನ್ನು ಅಲಂಕರಿಸಬೇಕು ಎಂದು ಸಲಹೆ ನೀಡಿದರು.

ನಂತರ ದಾದಾಪೀರ ಹಡಲಗೇರಿ ಮಾತನಾಡಿ ಹುನಗುಂದ ತಾಲೂಕಿನ ಅಮರಾವತಿ ಗ್ರಾಮದ ಕಾವ್ಯ ರಡ್ಡಿ ಮೊಟ್ಟ ಮೊದಲು ನಮ್ಮ ಮಂಗಳಮುಖಿಯ ಸಮುದಾಯವನ್ನು ಸೇರಲು ಬಂದಾಗ ಚಿಕ್ಕ ವಯಸ್ಸು , ನಮ್ಮ ಹತ್ತಿರ ಬಂದು ನಾನು ಮನೆಯನ್ನು ಬಿಟ್ಟು ಹೊರ ಬಂದಿದ್ದೇನೆ ಮತ್ತು ಶಾಲೆಯನ್ನು ಕಲಿತು ಸರಕಾರಿ ನೌಕರಿ ಪಡೆಯುತ್ತೇನೆಂದು ಹೇಳಿದಾಗ ನಾನು ಸಹಿತ ನಮ್ಮೆಲ್ಲಾ ಸಮುದಾಯ ಇವಳಿಗೆ ಬೇನ್ನೆಲುಬಾಗಿ ನಿಂತು ಎಲ್ಲಾ ರೀತಿಯಲ್ಲಿಯೂ ಸಹಕಾರ ನೀಡಿದ ಪರಿಣಾಮ ಸಧ್ಯ ಚಿತ್ರದುರ್ಗದ ನ್ಯಾಯಲಯದಲ್ಲಿ ಅಟೆಂಡರ್ ಹುದ್ದೇಯನ್ನು ಪಡೆದುಕೊಂಡಿದ್ದಾಳೆ , ಇದು ಸಮಾಜದಕ್ಕೆ ಮಾದರಿ ಹಾಗೂ ನಮ್ಮ ಮಂಗಳಮುಖಿ ಸಮುದಾಯಕ್ಕೆ ಹೆಮ್ಮೆ ಪಡುವಂತ ಮಹತ್ತರ ಸಾಧನೆ, ಈ ನಮ್ಮ ಸಮುದಾಯದ ಮಕ್ಕಳು ಉನ್ನತವಾದ ಸಾಧನೆ ಮಾಡಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸುಸ್ಮಿತಾ ಎಳವಾ, ರಾಗೀಣಿ ಗಂಗೂರ, ಹಣಮವ್ವ ಅಮರಗೋಳ, ಮಂಜುಳಾ ಹಡಲಗೇರಿ, ಅಕ್ಷಾ ಕಪನೂರ ಹಣಮವ್ವ ಜೋಗಿನ್, ನವಸ್ಪೂರ್ತಿ ಸಂಘದ ಮುಖ್ಯಸ್ಥರಾದ ಅಶೋಕ ಬಾಲಪ್ಪಗೋಳ, ಹುಲಗಪ್ಪ ಮಾದರ, ಅರುಣ ಚವ್ಹಾಣ ಇನ್ನಿತರರು ಇದ್ದರು.

ಸಚಿವ ಸಂಪುಟದಿಂದ ಅಮಿತ್ ಶಾ ಕೈ ಬಿಡಲು ಅಗ್ರಹ

ಸುಲ್ತಾನ ಕ್ರಾಂತಿ ಸೇನೆ ಪ್ರತಿಭಟನೆ । ಕ್ರಮ ಕೈಗೊಳ್ಳುವರೆಗೆ ಹೋರಾಟ ನಿಲ್ಲದು

ಉದಯಕಾಲ ನ್ಯೂಸ್

ಸಿಂದಗಿ: ಭಾರತ ದೇಶದ ಪವಿತ್ರ ಸ್ಥಾನ ಪಾರ್ಲಿಮೆಂಟನಲ್ಲಿ ಕೇಂದ್ರ ಸರ್ಕಾರದ ಗೃಹ ಸಚಿವ ಅಮಿತ್ ಶಾ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ವ್ಯಸನವಾಗಿದ್ದೆ ಎಂಬ ಮಾತು ಹೇಳಿ ಮೂಲನಿವಾಸಿ ಭಾರತೀಯರ ಗೌರವಕ್ಕೆ ದಕ್ಕೆ ತರುವಂತ ಕೆಲಸ ಮಾಡಿದ್ದಾರೆ. ಮಾನ್ಯ ರಾಷ್ಟ್ರ ಪತಿಗಳು ಮದ್ಯ ಪ್ರವೇಶಿಸಿ ಅವರಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಜೊತೆಗೆ ಅವರನ್ನು ಕೇಂದ್ರ ಸರ್ಕಾರದ ಮಂತ್ರಿ ಮಂಡಲ ದಿಂದ ಕೈ ಬಿಡಬೇಕು ಕ್ರಮ ಕೈಗೊಳ್ಳುವರೆಗೆ ನಮ್ಮ ಹೋರಾಟ ನಿಲ್ಲದು ಎಂದು ಟೀಪು ಸುಲ್ತಾನ ಕ್ರಾಂತಿ ಸೇನೆ ಸಂಸ್ಥಾಪಕ ದಸ್ತಗೀರ ಮುಲ್ಲಾ ಆಕ್ರೋಶ ವ್ಯಕ್ತಪಡಿಸಿದರು.

ಮಂಗಳವಾರ ಪಟ್ಟಣದ ತಹಸಿಲ್ದಾರ್ ಕಚೇರಿಯ ಮುಂಭಾಗದಲ್ಲಿ ಟೀಪು ಕ್ರಾಂತಿ ಸೇನೆ ಸದಸ್ಯರೊಂದಿಗೆ ಪ್ರತಿಭಟನೆ ನಡೆಸಿ ತಹಸೀಲ್ದಾರ್ ಮೂಲಕ ರಾಷ್ಟಪತಿಗಳಿಗೆ ಮನವಿ ಸಲ್ಲಿಸಿ ಅವರು ಮಾತನಾಡಿದರು.

ಅಂದು ಡಾ. ಅಂಬೇಡ್ಕರ್ ಅವರು

ಸಂವಿಧಾನ ಬರೆಯದಿದ್ದರೆ ದೇಶದಲ್ಲಿ ಇರುವ ಸಣ್ಣ ಪುಟ್ಟ ಸಮುದಾಯಗಳು ಸಾವಿಗೆ ಶರಣಾಗುವ ಸಂದರ್ಭ ಬರುತಿತ್ತು ವಿಶ್ವದಲ್ಲೇ ಶ್ರೇಷ್ಠವಾದ ಸಂವಿಧಾನ ನಮ್ಮದು ಸಂವಿಧಾನ ಭಾರತ ದೇಶದ ಭವಿಷ್ಯ ಉಜ್ವಳಗೊಳಿಸಿದ ಡಾ ಬಾಬಾಸಾಹೇಬರು ದೀನ ದಲಿತರ ಹಿಂದುಳಿದ ವರ್ಗಗಳ ಪಾಲಿಗೆ ದೇವರ ಸಮಾನರು ಅವರನ್ನು ಕೀಳಾಗಿ ಚುಚ್ಚು ಮಾತನಾಡಿದ ಭ್ರಷ್ಟ ಬಿಜೆಪಿ ಕೇಂದ್ರ ಸರ್ಕಾರದ ಗೃಹಮಂತ್ರಿ ಅವರನ್ನು ಕೂಡಲೇ ಸಚಿವ ಸಂಪುಟದಿಂದ ಕೈ ಬಿಡಬೇಕು ಜೊತೆಗೆ ಅಲಹಾಬಾದ ಹೈಕೋರ್ಟ್ ನ್ಯಾಯಮೂರ್ತಿ ಶೇಖರ ಯಾದವ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕಿಡಿಕಾರಿದರು.

ನಂತರ ಉತ್ತರ ಕರ್ನಾಟಕ ಅಧ್ಯಕ್ಷ ರಜಾಕ್ ನಾಟಿಕಾರ ಮಾತನಾಡಿ ಅಲಹಬಾದನ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶೇಖರ್ ಯಾದವ್ ಖಾಸಗಿ ಕಾರ್ಯಕ್ರಮ ಒಂದರಲ್ಲಿ ಭಾಗವಹಿಸಿ ಒಂದು ಧರ್ಮವನ್ನು ಗುರಿಯಾಗಿಟ್ಟುಕೊಂಡು ಧಾರ್ಮಿಕ ಅಲ್ಪಸಂಖ್ಯಾತರಾದ ಮುಸ್ಲಿಮರ ಭಾವನೆಗಳಿಗೆ ದಕ್ಕೆ ತರುವಂತ ಕೆಲಸ ಮಾಡಿದ್ದಾರೆ ಅಷ್ಟೇ ಅಲ್ಲದೆ ಈ ದೇಶ ಬಹು ಸಂಖ್ಯಾತರ ಆಸೆಯಂತೆ ನಡೆಯಬೇಕು ಎಂದು ಸಂವಿಧಾನ ಹೇಳಿಕೆ ನೀಡುವದರ ಮುಖಾಂತರ ಭಾರತೀಯ ಸಂವಿಧಾನಕ್ಕೆ ಹಾಗೂ ಭಾರತೀಯರಿಗೆ ಅಗೌರವ ತೋರಿದ್ದಾರೆ ಕೂಡಲೇ ಇವರಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಟಿಪ್ಪು ಕ್ರಾಂತಿ ಸೇನೆ ಸಂಘಟನೆಯು ಉಗ್ರವಾಗಿ ಖಂಡಿಸುತ್ತದೆ ಎಂದರು

ಈ ಸಂದರ್ಭದಲ್ಲಿ ವಿದ್ಯಾರ್ಥಿ ಘಟಕದ ಅಧ್ಯಕ್ಷ ಆಸೀಫ್ ಇಂಡಿಕರ್, ನಗರ ಘಟಕ ಅಧ್ಯಕ್ಷ ಇಮ್ರಾನ್ ಬಾಗವಾನ, ಸಾಜೀದ್ ಮುಲ್ಲಾ, ಇನ್ನು ಟೀಪು ಕ್ರಾಂತಿ ಸೇನೆ ಸಿಂದಗಿ ತಾಲ್ಲೂಕಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಮಹಿಳಾ ಟಿ-20 ತಂಡಕ್ಕೆ ವಿದ್ಯಾರ್ಥಿನಿ ಜಯಶ್ರೀ ಕೂಚಬಾಳ ಆಯ್ಕೆ

ಉದಯಕಾಲ ನ್ಯೂಸ್

ಸಿಂದಗಿ: ಪಟ್ಟಣದ ಶ್ರೀ ಪದ್ಮರಾಜ್ ಮಹಿಳಾ ಪದವಿ ಕಾಲೇಜಿನ ವಿದ್ಯಾರ್ಥಿನಿ ಜಯಶ್ರೀ ರಾಜಶೇಖರ ಕೂಚಬಾಳ ಕರ್ನಾಟಕ ಅಂಡರ್ 23 ಮಹಿಳಾ ಟಿ-20 ತಂಡಕ್ಕೆ ರಾಯಚೂರು ವಿಭಾಗದಿಂದ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ಶೀನ್ ಕ್ರಿಕೆಟ ಅಕಾಡೆಮಿಯಲ್ಲಿ ಕ್ರಿಕೆಟ್ ತರಬೇತಿ ಪಡೆದುಕೊಂಡು ಪ್ರಸ್ತುತ ಬೆಂಗಳೂರಿನ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದಾಳೆ. 2024-25ನೇ ಸಾಲಿನ ಕರ್ನಾಟಕ ರಾಜ್ಯ ಕ್ರಿಕೆಟ್ ಅಸೋಸಿಯೇಷನ್ ಟಿ20 ತಂಡದ ಅಂಡರ್ 19 ಹಾಗೂ ಅಂಡರ್ 23 ಎರಡು ವಿಭಾಗದಲ್ಲಿ ಸಂಭವನೀಯ ಆಟಗಾರ್ತಿಯಾಗಿ ವಿಶೇಷ ಸಾಧನೆಗೈದ ಕ್ರಿಕೆಟ್ ಕ್ರೀಡಾಪಟು ಜಯಶ್ರೀ ಕೂಚಬಾಳ ಅವರಿಗೆ ಫ್ರೆಂಡ್ಸ್ ಸ್ಪೋರ್ಟ್ಸ್ ಕ್ಲಬ್ ಸಿಂದಗಿ, ಕೊಹಿನೂರು ಕ್ರಿಕೆಟ್ ಕ್ಲಬ್ ವಿಜಯಪುರ, ಶಾಸಕ ಅಶೋಕ್ ಮನಗೂಳಿ, ಗುತ್ತಿಗೆದಾರ ಮುತ್ತು ಮುಂಡೇವಾಡಗಿ, ಉಮೇಶ ಜೋಗುರ, ನಾರಾಯಣ ಕುಲಕರ್ಣಿ, ಮುತ್ತು ಸೊನ್ನದ, ಶ್ರೀಕಾಂತ ಹೂಗಾರ, ಯಂಕನಗೌಡ ಪಾಟೀಲ, ರವಿ ದೇವರಮನಿ, ಗೊಲ್ಲಾಳಪ್ಪಗೌಡ, ಸಿದ್ದನಗೌಡ ಪಾಟೀಲ, ಸಿದ್ದಲಿಂಗ ಕಿಣಗಿ ಸೇರಿದಂತೆ ಹಲವರು ಅಭಿನಂದನೆ ಸಲ್ಲಿಸಿದ್ದಾರೆ.

ಮಕ್ಕಳ ಸಂತೆ ಕಾರ್ಯಕ್ರಮ

ಉದಯಕಾಲ ನ್ಯೂಸ್

ಕಾಗವಾಡ: ತಾಲೂಕಿನ ನ್ಯೂ ಇಂಗ್ಲಿಷ್ ಮೀಡಿಯಂ ಪ್ರೈಮರಿ ಸ್ಕೂಲ್ ಶಾಲೆಯಲ್ಲಿ ಮಕ್ಕಳ ಸಂತೆಯನ್ನು ಆಯೋಜಿಸಲಾಗಿತ್ತು.

ಶಾಲಾ ಮಕ್ಕಳಲ್ಲಿ ವ್ಯವಹಾರಿಕ ಜ್ಞಾನವನ್ನು ಹೆಚ್ಚಿಸುವ ಉದ್ದೇಶದಿಂದ ಮಗಳವಾರ ದಿ. 24 ರಂದು ನ್ಯೂ ಇಂಗ್ಲಿಷ್ ಮೀಡಿಯಂ ಪ್ರೈಮರಿ ಸ್ಕೂಲ್ ಶಾಲೆಯ ಮಕ್ಕಳಿಗೆ ಶಾಲಾ ಆವರಣದಲ್ಲಿ ಮಕ್ಕಳ ಸಂತೆಯನ್ನು ಹಮ್ಮಿಕೊಳ್ಳಲಾಗಿತ್ತು.

ಸಂತೆಯಲ್ಲಿ ವಿವಿಧ ಬಗೆಯ ಸೊಪ್ಪು, ತರಕಾರಿ, ಬೇಲ್‌ಪುರಿ, ಬೋಂಡಾ, ಬಜ್ಜಿ, ಚಹಾ, ಟೀ, ಬಟ್ಟೆಗಳು ಸೇರಿದಂತೆ ಹಲವು ವಸ್ತುಗಳನ್ನು ಮಾರಾಟ ಮಾಡಲಾಯಿತು. ಮಕ್ಕಳು ಸಾರ್ವಜನಿಕರಿಗೆ ಮಾರುತ್ತಿದ್ದ ವಸ್ತುಗಳ ವ್ಯಾಪಾರ ನೈಜ ವ್ಯಾಪಾರಸ್ಥರನ್ನು ನಾಚಿಸುವಂತಿತ್ತು.

ಮಕ್ಕಳು ನಾವೇ ಹೆಚ್ಚು ವ್ಯಾಪಾರ ಮಾಡಬೇಕು ಎಂಬ ಛಲದಿಂದ ಪೋಷಕರನ್ನು ಕರೆದು ತಮ್ಮ ಅಂಗಡಿಯ ಸಾಮಗ್ರಿ ಖರೀದಿಸಲು ಒತ್ತಾಯಿಸುತ್ತಿದ್ದರು.

ಇದೇ ಸಮಯದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಜ್ಯೋತಿಕುಮಾರ ಪಾಟೀಲ್ ಮಾತನಾಡಿ ಮಕ್ಕಳಲ್ಲಿ ವ್ಯವಹಾರ ಜ್ಞಾನ ಅಭಿವೃದ್ದಿಗೆ ಮಕ್ಕಳ ಸಂತೆ ಹೆಚ್ಚು ಪ್ರೇರಣೆ ನೀಡುತ್ತದೆ. ಮಕ್ಕಳು ಜೀವನ ನಡೆಸಲು ವ್ಯವಹಾರ ಜ್ಞಾನದ ಅರಿವು ಮೂಡಿಸಬೇಕು. ಪೋಷಕರು ಮಕ್ಕಳನ್ನು ಅಂಗಡಿಗೆ ಕಳುಹಿಸಿದರೆ ವ್ಯಾಪಾರ ಮಾಡಿ ಸಾಮಗ್ರಿ ತರುವ ಶಕ್ತಿ ಬೆಳೆಸಿಕೊಳ್ಳುತ್ತಾರೆ. ಇತ್ತೀಚಿನ ದಿನಗಳಲ್ಲಿ ವಾಣಿಜ್ಯ ಶಾಸ್ತ್ರಕ್ಕೆ ಬೇಡಿಕೆ ಹೆಚ್ಚುತ್ತಿದೆ. ಅನೇಕ ಉದ್ಯಮಗಳಲ್ಲಿ ವಾಣಿಜ್ಯ ಪದವಿಗೆ ಆದ್ಯತೆ ನೀಡಲಾಗುತ್ತಿದೆ. ಮಕ್ಕಳಲ್ಲಿ ಪ್ರಾಯೋಗಿಕವಾಗಿ ವ್ಯವಹಾರ ಜ್ಞಾನ

ಬೆಳೆಸಲು ಮಕ್ಕಳ ಸಂತೆಗಳು ನಡೆಸಬೇಕು ರಾಜೇಂದ್ರ ಕರವ ,ಮಕ್ಕಳ ಸಂತೆಗೆ ಚಾಲನೆ ನೀಡಿದರು, ಇದೇ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲರಾದ ಅಶ್ವಿನಿ ಅವತಾಡೆ ಶಿಕ್ಷಕರು ಮತ್ತು ಶಾಲಾ ಆಡಳಿತ ಮಂಡಳಿ ಸದಸ್ಯರು, ಅನೇಕ ನಾಗರಿಕರು ಇದ್ದರು.

ಈ ವೇಳೆಯಲ್ಲಿ ಜ್ಯೋತಿಕುಮಾರ ಪಾಟೀಲ, ಕಾಕಾ ಪಾಟೀಲ್, ರಾಜೇಂದ್ರ ಕರಾವ, ಅನಿಲ ಕೋರೆ, ಬಾಳಗೌಡ ಪಾಟೀಲ್, ಮಹಾದೇವ ಕೋಳೆಕರ, ಪ್ರಶಾಂತ್ ನಾಯ್ಕ,ಆರ್ ಟಿ ಗುರವ, ಎಮ್ ಬಿ ಪಾಟೀಲ್, ಬಿ ಡಿ ಪಾಟೀಲ್, ಓಂಕಾರ್ ಗುಮೇಟೆ,ವಿನಾಯಕ ರಾಮದುರ್ಗ,ಆರ್ ಎಸ್ ಹಿರೇಮಠ,ಉಪಸ್ಥಿತರಿದ್ದರು.

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ನೋಂದಾಯಿತ ಕಚೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ ಎ ಕ್ರಾಸ್, 18ನೇ ಮೈನ್ ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095 ಕರ್ನಾಟಕ.
ಶಾಖಾ ಕಚೇರಿ: ವಾರ್ಡ್ ನಂ. 2, ಸಿಎಸ್‌ಟಿ ನಂ. 5212 ರಿಂದ 5217/9ಬಿ, ಜಮಖಂಡಿ-ಕುಡಚಿ ರಸ್ತೆ, ಜಮಖಂಡಿ, ಕರ್ನಾಟಕ-587301.

ಇ-ಹರಾಜು ಸೂಚನೆ

ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಆಕ್ಟ್, 2002ನ್ನು ಓದಿಕೊಂಡಂತೆ ನಿಯಮ 8(6) ಮತ್ತು 9(1) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ಅನ್ವಯ ಇ-ಹರಾಜು ಮಾರಾಟ ಪ್ರಕಟಣೆ
ಕೆಳಸಹಿದಾರರು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಅಧಿಕೃತ ಅಧಿಕಾರಿಯಾಗಿದ್ದು, ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4)ರ ಸರ್ಫೇಸಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸ್ವಾಧೀನಪಡಿಸಿಕೊಂಡಿರುತ್ತಾರೆ. ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರ(ರು)ರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಪಟ್ಟಿ ಮಾಡಿರುವ ಸ್ಥಿರಾಸ್ತಿಗಳನ್ನು ಬ್ಯಾಂಕ್ ಗೆ ಬರಬೇಕಾಗಿರುವ ಬಾಕಿ ಹಣದ ವಸೂಲಾತಿಗಾಗಿ "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ಆಧಾರದ ಮೇಲೆ ಈ ಕೆಳಗೆ ಹೆಸರಿಸಿರುವ ದಿನಾಂಕ ಮತ್ತು ಸಮಯದಂದು ಮಾರಾಟ ಮಾಡಲಿರುವರು.

ಸಾಲದ ಖಾತಾ ಸಂ./ ಸಾಲಗಾರರ ಹೆಸರು	(1) 13-2 ನೋಟೀಸ್ ದಿನಾಂಕ & ತಗಾದೆ ಮೊತ್ತ (2) ಸ್ವಾಧೀನತೆ ದಿನಾಂಕ	ಪ್ರಸಕ್ತ ಬಾಕಿ	ಮೀಸಲು ಬೆಲೆ	ಅರ್ನೆಸ್ಟ್ ಠೇವಣಿ ಹಣ (ಇಎಂಡಿ)
117421008000005 1. ಶ್ರೀ ಶಿವಾನಂದ ಶಿವಪ್ಪಯ್ಯನಮಠ 2. ಶ್ರೀಮತಿ ಧನೇಶ್ವರಿ ಶಿವಪ್ಪಯ್ಯನಮಠ	(1) 02.06.2021 ಮತ್ತು ರೂ.11,41,899/- (ಹನ್ನೊಂದು ಲಕ್ಷ ನಲವತ್ತೊಂದು ಸಾವಿರದ ಎಂಟುನೂರ ತೊಂಭತ್ತೊಂಬತ್ತು ರೂಪಾಯಿ ಮಾತ್ರ) 30.05.2021ರಂತೆ (2) ಸಾಂಕೇತಿಕ ಸ್ವಾಧೀನತೆ 06.12.2022 ಭೌತಿಕ ಸ್ವಾಧೀನತೆ : 27.12.2023	ರೂ.24,49,858/- (ಇಪ್ಪತ್ತ ನಾಲ್ಕು ಲಕ್ಷ ನಲವತ್ತೊಂಬತ್ತು ಸಾವಿರದ ಎಂಟುನೂರ ಐವತ್ತೆಂಟು ರೂಪಾಯಿ ಮಾತ್ರ)	ರೂ.13,92,000/- (ಹದಿಮೂರು ಲಕ್ಷ ತೊಂಭತ್ತೆರಡು ಸಾವಿರ ರೂಪಾಯಿ ಮಾತ್ರ)	ರೂ.1,39,200/- (ಒಂದು ಲಕ್ಷ ಮೂವತ್ತೊಂಭತ್ತು ಸಾವಿರದ ಇನ್ನೂರ ರೂಪಾಯಿ ಮಾತ್ರ)

ಆಸ್ತಿಯ ಷೆಡ್ಯೂಲ್ : ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ಆಸ್ತಿಯ ಸಿಟಿಎಸ್ ನಂ. 3330/ಎ2, ವಿಸ್ತೀರ್ಣ 54.34 ಚ.ಮೀಟರ್ ಮಂಜಿ ಗಲ್ಲಿ, ಜಮಖಂಡಿ, ಜಮಖಂಡಿ ಸಿಎಂಸಿ ವ್ಯಾಪ್ತಿಯಲ್ಲಿದ್ದು, ಜಮಖಂಡಿ ಉಪನೋಂದಣಾಧಿಕಾರಿಗಳ ವ್ಯಾಪ್ತಿಗೆ ಒಳಪಟ್ಟಿದ್ದು, ಚಕ್ಕುಬಂದಿ: ಆಸ್ತಿ ಸಿಟಿಎಸ್ ನಂ. 3330/ಎ2, ಪೂರ್ವಕ್ಕೆ: ಸಿಟಿಎಸ್ ನಂ. 3331, 3330/ಬಿ/2, 3330/ಬಿ/1, ಪಶ್ಚಿಮಕ್ಕೆ: ಸುರೇಶ್ ನಿಂಗಯ್ಯ ಶಿವಪ್ಪಯ್ಯನಮಠ ಇವರ ಆಸ್ತಿ, ಉತ್ತರಕ್ಕೆ: ಸಿಟಿಎಸ್ ನಂ. 3322 ಮತ್ತು 3332, ದಕ್ಷಿಣಕ್ಕೆ: ರಸ್ತೆ.

ಇ-ಹರಾಜಿನ ದಿನಾಂಕ ಮತ್ತು ಸಮಯ: 17.01.2025 ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 12.00 ಗಂಟೆ

ಬಿಡ್ ಸಲ್ಲಿಸಲು ಕೊನೆಯ ದಿನಾಂಕ 16.01.2025ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ	ಆಸ್ತಿಗಳ ಪರಿವೀಕ್ಷಣೆ ದಿನಾಂಕ ಮತ್ತು ಸಮಯ 15.01.2025ರಂದು ಬೆಳಿಗ್ಗೆ 10.00 ರಿಂದ ಸಂಜೆ 5.00 ರ ನಡುವೆ

ಹೆಚ್ಚಿನ ಮಾಹಿತಿಗಾಗಿ ಬ್ಯಾಂಕ್‌ನ ಅಧಿಕೃತ ಅಧಿಕಾರಿಯವರನ್ನು ಸಂಪರ್ಕಿಸಿ:
ಶ್ರೀ ನವರತ್ನ ಕುಮಾರ್ - 96633 84014 / ಶ್ರೀ ಟಿಜೊ ಎಮ್ ಸಾಜನ್ - 78451 92961 / ಶ್ರೀ ಆರ್ ಪುಷ್ಪಕಾಂತ್ - 98431 14222

ಹರಾಜನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಏನಿದೆಯೋ ಹಾಗೆ" ನಡೆಸಲಾಗುವುದು
ಹರಾಜನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಅನುಮೋದಿತ ಇ-ಹರಾಜು ಸೇವಾ ಪೂರೈಕೆದಾರ - ಮೆ॥ ಸಿ1 ಇಂಡಿಯ ಪ್ರೈ. ಲಿ., ಮೂಲಕ ನಡೆಸಲಾಗುವುದು. ಸಂಪರ್ಕ ವ್ಯಕ್ತಿ: ಶ್ರೀ ಪ್ರಭಾಕರನ್ (ಮೊ. ಸಂ. 7418281709). ಅಪೇಕ್ಷಿತ ಬಿಡ್ಡುದಾರರು https://www.bankeauctions.com ಅಥವಾ https://www.ujjivanfb.in/e-auctions ಗೆ ಭೇಟಿ ನೀಡಿ ಆಸ್ತಿಗಳ ಹೆಚ್ಚಿನ ವಿವರಗಳನ್ನು ತಿಳಿದುಕೊಂಡು, ಬಿಡ್‌ನಲ್ಲಿ ಭಾಗವಹಿಸಬಹುದು ಹಾಗೂ ಅವರು ತಮ್ಮ ಹೆಸರನ್ನು https://www.bankeauctions.com ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಉಚಿತವಾಗಿ ತಮ್ಮ ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಳ್ಳಬಹುದು. ಅಪೇಕ್ಷಿತ ಬಿಡ್ಡುದಾರರು ಇ ಹರಾಜು ಬಗ್ಗೆ ಆನ್‌ಲೈನ್ ತರಬೇತಿಯನ್ನು ಸೇವಾ ಪೂರೈಕೆದಾರರಾದ ಮೆ॥ ಸಿ1 ಇಂಡಿಯ ಪ್ರೈ.ಲಿ., ಸಹಾಯವಾಣಿ ಸಂ.7291918824, 25, 26, ಸಪೋರ್ಟ್ ಇ-ಮೇಲ್ ಐಡಿ : support@bankeauctions.com ಹರಾಜು ಪೋರ್ಟಲ್ : https://www.bankeauctions.com.
ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಬ್ಯಾಂಕ್ / ಪೂರಕ ಭದ್ರತಾದಾರರ ವೆಬ್‌ಸೈಟ್‌ನಲ್ಲಿ ನೀಡಲಾದ ಲಿಂಕ್‌ನ್ನು ಆಧಾರ ಮಾಡಿಕೊಳ್ಳಿ
https://www.ujjivansfb.in/e-auctions / https://www.bankeauctions.com.

ದಿನಾಂಕ: 25.12.2024
ಸ್ಥಳ: ಬೆಂಗಳೂರು
ಸಹಿ/-
ಅಧಿಕೃತ ಅಧಿಕಾರಿ
ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

Udayakala printed and published by **K.N.Puttalingaiah** on behalf of **Anikethana Publication and Printers** and Printed at M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd impression Building 3360/4, Gondi halli galli Belagavi-590001, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi, ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030 and Published at no 1576, Rame Gowda Building, 2nd floor, V.V.Road, Mandya-571 401. ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, SHIMOGA- 577 201 **Editor: K N Puttalingaiah** (Responsible for all the news printed). All rights reserved. Reproduction in whole or in part without written permission is prohibited.RNI REG NO. 71090/97.Volume: 05 Issue: 273